

# ಪುಷ್ಪ ಪ್ರಚಾರ ತಂತ್ರ

■ ವಿಶಾಖ ಎನ್.

'ಪುಷ್ಪ' ತೆಲುಗು ಚಿತ್ರವನ್ನು ದಕ್ಷಿಣ ಭಾರತದ ಎಲ್ಲ ಪ್ರೇಕ್ಷಕರತ್ತಲೂ ತಲುಪಿಸಬೇಕು ಎನ್ನುವ ಉಮೇದಿನಿಂದ ಇಡೀ ಚಿತ್ರತಂಡ ಬಿಡುಗಡೆಗೆ ಕೆಲವು ವಾರಗಳ ಮುಂಚೆ ಕಾರ್ಯತಂತ್ರ ರೂಪಿಸಿತು. ತೆಲಂಗಾಣದಲ್ಲಿ ಐದು ಸಾವಿರ ಜನರನ್ನು ಸೇರಿಸಿ ಕಾರ್ಯಕ್ರಮ ಮಾಡಲು ಹೊರಟಿತ್ತು. ಆದರೆ, ಅಲ್ಲಿ ಹದಿನೈದು ಸಾವಿರಕ್ಕೂ ಹೆಚ್ಚು ಜನ ಸೇರುತ್ತಾರೆಂಬ ನಿರೀಕ್ಷೆ ಮೂಡಿದ್ದೇ ಕಾರ್ಯಕ್ರಮ ರದ್ದಾಯಿತು. ಅಷ್ಟೊಂದು ಜನರನ್ನು ಕೋವಿಡ್ ನಿಯಮಾವಳಿಗಳು ಪೂರ್ಣ ಸಡಿಲವಾಗದ ಈ ಹೊತ್ತಿನಲ್ಲಿ ನಿರ್ವಹಿಸುವುದು ಕಷ್ಟ ಎನ್ನುವುದು ಚಿತ್ರತಂಡದ ಪ್ರತಿಕ್ರಿಯೆ. ಸಿನಿಮಾ ತೆರೆಕಂಡು ನಿರೀಕ್ಷಿತ ಫಲಿತಾಂಶ ಸಿಕ್ಕರೆ ಮತ್ತೆ ಅಲ್ಲಿಯೇ ಪ್ರೇಕ್ಷಕರನ್ನು ಎದುರುಗೊಳ್ಳುವುದಾಗಿ ಚಿತ್ರದ ನಾಯಕ ಅಲ್ಲು ಅರ್ಜುನ್ ಹೇಳಿರುವುದನ್ನೂ 'ಪ್ರಚಾರದ ತಂತ್ರ' ಎಂದೇ ವಿಶ್ಲೇಷಿಸಲಾಗಿದೆ.

'ಆರ್ಯ', 'ನಾನತೊ ಪ್ರೇಮತೋ', 'ರಂಗಸ್ಥಲಂ' ತರಹದ ಜನಪ್ರಿಯ ಚಿತ್ರಗಳನ್ನು ನಿರ್ದೇಶಿಸಿದ ಸುಕುಮಾರ್ 'ಪುಷ್ಪ' ಚಿತ್ರಕ್ಕೆ ಆ್ಯಕ್ಷನ್–ಕಟ್ ಹೇಳಿದ್ದಾರೆ. ರಕ್ತಚಂದನ ಕಳ್ಳಸಾಗಣೆ ಮಾಡುವ ಲಾರಿ ಚಾಲಕನ ಪಾತ್ರದಲ್ಲಿ ಅಲ್ಲು ಅರ್ಜುನ್ ಕಾಣಿಸಿಕೊಂಡಿದ್ದು, ಕನ್ನಡಿತಿ ರಶ್ಮಿಕಾ ಮಂದಣ್ಣ ಅವರಿಗೆ ನಾಯಕಿಯಾಗಿದ್ದಾರೆ. ಮಲಯಾಳಂ ನಟ ಫಹಾದ್ ಫಾಸಿಲ್ ಕೂಡ ಪ್ರಮುಖ ಪಾತ್ರದಲ್ಲಿ ಅಭಿನಯಿಸಿರುವುದು ವಿಶೇಷ. ಅವರನ್ನು 'ಬೇರೆ ನೆಲದಿಂದ ಬಂದ, ಇನ್ನೊಬ್ಬ ತಾಯಿಯಿಂದ ಜನ್ಮ ಪಡೆದ ನನ್ನ ಸಹೋದರ' ಎಂದು ಅಲ್ಲು ಅರ್ಜುನ್ ಹೊಗಳಿದ್ದೂ ಆಗಿದೆ.

ತೆಲುಗಿನ ನೆಲದಲ್ಲಿ ಅಷ್ಟೇ ಅಲ್ಲದೆ ಚೆನ್ನೈನಲ್ಲೂ ಅಲ್ಲು ಅರ್ಜುನ್ ನೇತೃತ್ವದಲ್ಲಿ ಚಿತ್ರತಂಡ ಪ್ರಚಾರ ನಡೆಸಿತು. ತಮಿಳಿನಲ್ಲೂ ಸಿನಿಮಾ ತೆರೆಕಾಣುತ್ತಿರುವುದರಿಂದ ಈ ಪ್ರಚಾರ ಅನಿವಾರ್ಯವಾಗಿತ್ತೆಂದು ನಿರ್ದೇಶಕ ಸುಕುಮಾರ್ ಹೇಳಿದರು.

'ಈ ಸಿನಿಮಾ ನೋಡಿದ ಸ್ವರ ಸಂಯೋಜಕ ದೇವಿಶ್ರೀ ಪ್ರಸಾದ್ ಇದು ತಮಿಳು ಚಿತ್ರದಂತೆ ಇದೆ ಅಂದರು. ನಮಗೂ ಇಂತಹ ಪ್ರತಿಕ್ರಿಯೆಯೇ ಬೇಕಿತ್ತು. ಚಿತ್ರದ ಕಥೆಯು ಯಾರಿಗೆ ಬೇಕಾದರೂ ಕನೆಕ್ಟ್ ಆಗುತ್ತದೆ. ಭೌಗೋಳಿಕವಾಗಿ ಅಷ್ಟೇ ಅಲ್ಲದೆ ಕಥನ ಕುತೂಹಲದ ದೃಷ್ಟಿಯಿಂದಲೂ ಹಿಡಿದಿಡುತ್ತದೆ. ಕೋವಿಡ್ ಕಾಲದಲ್ಲಿ ಕಡಿಮೆ ತಾಂತ್ರಿಕ ವರ್ಗವನ್ನು ಬಳಸಿಕೊಂಡು ಚಿತ್ರೀಕರಣ ನಡೆಸಿದ ಕಷ್ಟ ನಮಗಷ್ಟೇ ಗೊತ್ತು' ಎಂದು ಅಲ್ಲು ಅರ್ಜುನ್ ಭಾವುಕರಾಗಿ ನುಡಿಯಲು ಕಾರಣವಿತ್ತು.

'ಪುಷ್ಪ' ಚಿತ್ರ ತೆರೆಕಂಡು ಕೆಲವೇ ದಿನಗಳಾಗಿವೆ. ಎರಡು ವರ್ಷಗಳ ಪರಿಶ್ರಮಕ್ಕೆ ಬಾಕ್ಸ್ ಆಫೀಸ್‌ನಲ್ಲಿ ಏನೆಲ್ಲ ಪ್ರತಿಕ್ರಿಯೆ ಬರುತ್ತದೆ ಎನ್ನುವುದು ಸದ್ಯದಲ್ಲೇ ಗೊತ್ತಾಗಲಿದೆ. ■



# 'ವಲಿಮೈ'ನಲ್ಲಿ ಹುಮಾ

'ವಲಿಮೈ' ತಮಿಳು ಸಿನಿಮಾ ಚಿತ್ರೀಕರಣದ ಕೆಲವು ವಿಡಿಯೊ ತುಣುಕುಗಳು ಸಾಮಾಜಿಕ ಜಾಲತಾಣದಲ್ಲಿ ಸದ್ದು ಮಾಡಿವೆ. ಅಜಿತ್ ಕುಮಾರ್ ತಮ್ಮ 50ನೇ ವಯಸ್ಸಿನಲ್ಲೂ ಸೂಪರ್ ಬೈಕ್ ಮೇಲೆ ಸಾಹಸ ದೃಶ್ಯಗಳಲ್ಲಿ ತೊಡಗಿಕೊಂಡಿರುವುದು ವಿಶೇಷ. ಅವರಿಗೆ ಜೋಡಿಯಾಗಿ ಬಾಲಿವುಡ್‌ನ ಹುಮಾ ಖುರೇಶಿ ನಟಿಸಿದ್ದಾರೆ. 'ಆರ್‌ಎಕ್ಸ್100' ಚಿತ್ರದ ಮೂಲಕ ಜನಮನ ಗೆದ್ದ ಕಾರ್ತಿಕೇಯ ಗುಮ್ಮಕೊಂಡ ತೆಲುಗಿನಿಂದ ಆಮದಾಗಿದ್ದಾರೆ. ಕಟ್ಟುಮಸ್ತು ಮೈಕಟ್ಟಿನ ಅವರಿರುವ ದೃಶ್ಯಗಳೂ ಚಿತ್ರೀಕರಣದ ತುಣುಕಿನ ವಿಡಿಯೊದಲ್ಲಿದೆ.

ಬೋನಿ ಕಪೂರ್ ನಿರ್ಮಿಸಿರುವ ಈ ಚಿತ್ರವನ್ನು ಎಚ್. ವಿನೋದ್ ನಿರ್ದೇಶಿಸಿದ್ದಾರೆ. ಕೋವಿಡ್ ಕಾರಣದಿಂದಾಗಿ ಅಂದುಕೊಂಡ ಕಾಲಮಿತಿಯಲ್ಲಿ ಚಿತ್ರೀಕರಣ ಪೂರೈಸಲು ಸಾಧ್ಯವಾಗಲಿಲ್ಲ. ಸೆಪ್ಟೆಂಬರ್‌ನಿಂದ ಮತ್ತೆ ಚಿತ್ರೀಕರಣ ಶುರುವಾಗಿದ್ದು, ಸಂಕ್ರಾಂತಿಯ ಹೊತ್ತಿಗೆ ಸಿನಿಮಾ ಬಿಡುಗಡೆ ಮಾಡಬೇಕೆಂಬ ಉದ್ದೇಶ ನಿರ್ಮಾಪಕರದ್ದು. ತಮಿಳು, ತೆಲುಗು ಹಾಗೂ ಹಿಂದಿ ನಟ–ನಟಿಯರು ಇರುವುದರಿಂದ ಇದನ್ನು 'ಪ್ಯಾನ್ ಇಂಡಿಯಾ ಚಿತ್ರ' ಎಂದು ನಿಸ್ಸಂಶಯವಾಗಿ ಕರೆಯಬಹುದು. ಡಬ್ಬಿಂಗ್ ಕೂಡ ಒಂದಿಷ್ಟು ಮಾರುಕಟ್ಟೆ ಸೃಷ್ಟಿಸಿರುವುದರಿಂದ ಇಂತಹ ಪ್ರಯತ್ನಗಳು ವ್ಯಾಪಕವಾಗುತ್ತಿವೆ. ಸಾಮಾನ್ಯವಾಗಿ ಅಭಿನಯ ಪ್ರಧಾನವಾದ ಪರ್ಯಾಯ ಚಿತ್ರಗಳಲ್ಲೇ ಹೆಚ್ಚಾಗಿ ನಟಿಸಿರುವ ಹುಮಾ, 'ಕಾಲಾ' ಚಿತ್ರದಲ್ಲಿ ರಜನೀಕಾಂತ್ ಅವರಿಗೂ ಜೋಡಿಯಾಗಿದ್ದರು. ಈಗ ಅಜಿತ್ ಕುಮಾರ್ ಜತೆಗೆ ತೆರೆಹಂಚಿಕೊಂಡಿದ್ದಾರೆ. ಅವರ ಪಾತ್ರ ಹೇಗಿರಲಿದೆ ಎನ್ನುವುದು ಮಾತ್ರ ಗುಟ್ಟಾಗಿದೆ. ■